# ಸೇವೆ ತೃಪ್ತಿಯಾಗದಿದ್ದರೆ ಹಣ ವಾಪಸ್

**ಬೆಂಗಳೂರು:** ಕಂಪನಿಯು ಒದಗಿಸಿದ ಸೇವೆಯು ಗ್ರಾಹಕನಿಗೆ ತೃಪ್ತಿಯಾಗದಿದ್ದರೆ ಹಣ ವಾಪಸ್ ನೀಡಲಾಗುವುದು ಅಥವಾ ಮತ್ತೊಮ್ಮೆ ಉಚಿತವಾಗಿ ಪೂರ್ಣ ತರಬೇತಿ ನೀಡಲಾಗುವುದು ಎಂದು ಕೇನಿಗ್ ಐಟಿ ತರಬೇತಿ ಕಂಪನಿ ಸಹ ಸಂಸ್ಥಾಪಕ ರೋಹಿತ್ ಅಗರ್‌ವಾಲ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಂಪನಿಯು ಭಾರತದಲ್ಲಿ ಐದು ಮತ್ತು ದುಬೈನಲ್ಲಿ ಒಂದು ಐಟಿ ತರಬೇತಿ ಕೇಂದ್ರ ಪ್ರಾರಂಭಿಸಿದೆ. ಸೇವೆ ತೃಪ್ತಿಯಾಗದಿದ್ದರೆ ಹಣ ವಾಪಸ್ ನೀಡುವ ಯುನಿಕ್ ಹ್ಯಾಪಿನೆಸ್ ಗ್ಯಾರಂಟಿ ಪ್ರೋಗ್ರಾಂ ಆರಂಭಿಸಿದೆ ಎಂದರು.

ಶೀಘ್ರದಲ್ಲೇ ಚೆನ್ನೈ ಮತ್ತು ಪುಣೆಯಲ್ಲಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಆಫ್ರಿಕಾ ಸರ್ಕಾರವು ಕಂಪನಿಗೆ 70 ಲಕ್ಷ ಡಾಲರ್ ಮೌಲ್ಯದ ಆರ್ಡರ್ ನೀಡಿದೆ. ಈಗ ನಾವು ನೇರ ವಾಸ್ತವ ತರಗತಿಗಳನ್ನೂ ಆರಂಭಿಸಿದ್ದೇವೆ. ಬೆಂಗಳೂರಿನ ಕೋರಮಂಗಲದಲ್ಲಿ ಒಂದು ಕೇಂದ್ರ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದರು.

ಮೈಕ್ರೋಸಾಫ್ಟ್, ಸಿಸ್ಕೋ, ಆ್ಯಂಡ್ರಾಯ್ಡ್, ಆಪಲ್, ಅಡೋಬ್ ಮತ್ತು ಒರೇಕಲ್ ನಂತಹ ಪ್ರಸಿದ್ಧ ಕಂಪನಿಗಳಿಗೆ ನಾವು ಐಟಿ ತರಬೇತಿ ನೀಡಿದ್ದೇವೆ ಎಂದರು.